# ಗರ್ಭಕೋಶ ತೆಗೆಯುವಿಕೆ ಯಾಕೆ?

ಎಷ್ಟೋ ಮಹಿಳೆಯರು ತಮ್ಮ ಸಮಸ್ಯೆ ಬಗ್ಗೆ ಹೇಳಿಕೊಳ್ಳುವುದೇ ಇಲ್ಲ. ಮೌನವಾಗೇ ನೋವು ನುಂಗುತ್ತಿರುತ್ತಾರೆ. ಹೊಟ್ಟೆಯಲ್ಲಿ ವಿಪರೀತ ನೋವು, ರಕ್ತಸ್ರಾವ ಕಂಡರೂ ಲಕ್ಷ್ಯವಹಿಸುವುದಿಲ್ಲ. ಆದರೆ ಕೊನೆಗೊಂದು ದಿನ ಸ್ತ್ರೀರೋಗ ತಜ್ಞರನ್ನು ಸಂಪರ್ಕಿಸಿ, ಪರೀಕ್ಷಿಸಿದಾಗ 'ಗರ್ಭಕೋಶವನ್ನು ತೆಗೆಯಬೇಕು' ಎನ್ನುತ್ತಾರೆ. ಇದೆಂಥ ಸ್ಥಿತಿ ನೋಡಿ. ಹೀಗೆ ಸ್ತ್ರೀತ್ವವನ್ನೇ ಕಳೆಯುವಂಥ ಶಸ್ತ್ರ ಚಿಕಿತ್ಸೆ ಮಾಡಿಸಲು ಯಾರು ತಾನೆ ಸಿದ್ಧ. ಆದರೆ ಉಪಾಯವಿಲ್ಲ. ಮಾಡಿಸಲೇಬೇಕು, ಜೀವ ಉಳಿಯಬೇಕೆಂದರೆ.



### ಗರ್ಭಕೋಶ ತೆಗೆಯಲು ಪ್ರೇರಕ ಅಂಶಗಳು

ಅನೇಕ ಮಹಿಳೆಯರಿಗೆ ಗರ್ಭಕೋಶದಿಂದ ಅನಿಯಮಿತವಾಗಿ ರಕ್ತಸ್ರಾವ ಆಗುತ್ತಿರಬಹುದು. ಇದು ಬಿಟ್ಟು ಬಿಟ್ಟು ಕಾಣಿಸಬಹುದು ಅಥವಾ ಒಂದೇ ಸಮನೆ ಆಗಬಹುದು. ಇದಲ್ಲದೇ, ಗರ್ಭಾಶಯದ ಒಳಪದರದಲ್ಲಿ ಎಂಡೋಮೆಟ್ರಿಯಾಸೀಸ್ ಕಾಯಿಲೆ ಕಾಣಿಸುತ್ತದೆ ಕೆಲವರಲ್ಲಿ. ಈ ತೊಂದರೆ ಕಾಣಿಸಿದರೆ– ಸಂಭೋಗದಲ್ಲಿ ನೋವು, ಹೊಟ್ಟೆಯಲ್ಲಿ ಸೆಳೆತ, ಅತಿಯಾದ ರಕ್ತಸ್ರಾವ, ಮುಟ್ಟಿನಲ್ಲಿ ವಿಪರೀತ ನೋವು ಇರುತ್ತದೆ. ಈ ಕಾರಣದಿಂದಲೂ ಗರ್ಭಕೋಶ ತೆಗೆಯುವ ಸಂದರ್ಭ ಬರುತ್ತದೆ.

ಇನ್ನು ಕೆಲವರಿಗೆ ಫೈಬ್ರಾಯಿಡ್ ಕಾಣಿಸುತ್ತವೆ. ಮುಟ್ಟಿನ ದಿನಗಳಲ್ಲಿ ಅಧಿಕ ರಕ್ತಸ್ರಾವವಾಗಿ ಹತ್ತು–ಹದಿನೈದು ದಿನಗಳವರೆಗೆ ಮುಂದುವರಿಯಬಹುದು. ನಂತರ ರಕ್ತ ಮಿಶ್ರಿತ ಸ್ರಾವ ಹೊರಬರಬಹುದು. ನಾರುಗಡ್ಡೆ ದೊಡ್ಡದಾದಾಗ ಹೊಟ್ಟೆ ನೋವು ಕಾಣಿಸುವುದಲ್ಲದೇ, ಹೊಟ್ಟೆ ಉಬ್ಬುತ್ತದೆ. ಇದು ಸಂತಾನಹೀನತೆಗೆ ಕಾರಣವಾಗಬಹುದು. ಲಕ್ಷಣ ಮುಂದುವರಿದರೆ ಗರ್ಭಕೋಶ ತೆಗೆಯಲೇಬೇಕು ಎಂದು ವೈದ್ಯರು ತಿಳಿಸುತ್ತಾರೆ. ಗರ್ಭಕೋಶ ಕ್ಯಾನ್ಸರ್ ಅತ್ಯಂತ ಜಟಿಲವಾದ ಸಮಸ್ಯೆ. ಮಹಿಳೆಯರ ಜೀವ ಹಿಂಡಿ ಬಿಡುತ್ತದೆ. ನಲವತ್ತು ವಯಸ್ಸು ದಾಟಿದ ಮಹಿಳೆಗೆ ಇದರ ಭಯ ಹೆಚ್ಚು. ಇಂತಹ ಮಹಿಳೆ ದಪ್ಪವಾಗಿದ್ದರೆ, ಮಧುಮೇಹ ಇದ್ದರೆ, ವಿವಾಹವಾಗದೇ ಇದ್ದ ಪಕ್ಷದಲ್ಲಿ, ರಕ್ತದೊತ್ತಡ ಮುಂತಾದ ಸಮಸ್ಯೆ ಇದ್ದಾಗ ಈ ಕಾಯಿಲೆ ಬರುವ ಸಾಧ್ಯತೆ ಹೆಚ್ಚು. ಈ ಸಂದರ್ಭದಲ್ಲಿ ಕೂಡ ಗರ್ಭಕೋಶಕ್ಕೆ ಹಾನಿಯಾಗುತ್ತದೆ. ಇದಲ್ಲದೇ, ಯೋನಿಮುಖದ ಕಾಯಿಲೆಗಳು, ಅಂಡಾಶಯ ಗಂಟುಗಳು ಇದ್ದರೂ ಗರ್ಭಕೋಶ ತೆಗೆಯುವ ಸೂಚನೆಯನ್ನು ಸ್ತ್ರೀ–ರೋಗ ತಜ್ಞರು ನೀಡುತ್ತಾರೆ.

### ಶಸ್ತ್ರಕ್ರಿಯೆ ಹೇಗೆ?

ಗರ್ಭಕೋಶ ತೆಗೆಯಬೇಕು ಎಂಬ ಸೂಚನೆ ಎಂಥ ಮಹಿಳೆಯನ್ನಾದರೂ ಕುಗ್ಗಿಸಿಬಿಡುತ್ತದೆ. ತನ್ನ ಅಸ್ತಿತ್ವದ ಸೂಚಕವಾದ ಮತ್ತು ಸೃಷ್ಟಿಯ ಅತ್ಯಂತ ಮೂಲಭೂತ ಕೇಂದ್ರವನ್ನು ದೇಹದಿಂದ ಬೇರ್ಪಡಿಸಬೇಕು ಎಂದಾಗ ಯಾರಾದರೂ ಅಧೀರರಾಗಲೇಬೇಕು. ಇಂತಹ ಸಂದರ್ಭದಲ್ಲಿ ಮಹಿಳೆಗೆ ಸಮಾಧಾನ ಮಾಡಬೇಕಾದ್ದು ಅಗತ್ಯ. ಕುಟುಂಬ ವರ್ಗದವರ ಸಹಕಾರ, ಪ್ರೀತಿ ಮುಖ್ಯ. ಎಲ್ಲಕ್ಕಿಂತ ಹೆಚ್ಚಾಗಿ ಪತಿಯ ಪ್ರೀತಿಯೊಂದು ರೋಗಿಯನ್ನು ಕಾಪಾಡುವುದು.

### ಲ್ಯಾಪ್ರೊಸ್ಕೋಪಿ ಏಕೆ ಉತ್ತಮ ವಿಧಾನ?

ಗರ್ಭಕೋಶ ತೆಗೆಯಲು 2 ಅತಿಮುಖ್ಯ ಶಸ್ತ್ರಕ್ರಿಯೆ ವಿಧಾನಗಳಿವೆ. ಹೊಟ್ಟೆ ಕೊಯ್ದು ಶಸ್ತ್ರಚಿಕಿತ್ಸೆ ಹಾಗೂ ಉದರದರ್ಶಕ ಶಸ್ತ್ರ ಚಿಕಿತ್ಸೆ. ಈ ಮೊದಲನೆ ವಿಧಾನದ ಮೂಲಕ ಅಂದರೆ ಹೊಟ್ಟೆ ಕೊಯ್ದು ಶಸ್ತ್ರ ಕ್ರಿಯೆ ಮಾಡುವ ವಿಧಾನ ತುಂಬಾ ಹಳೆಯದು. ಇದರಲ್ಲಿ 6 ಇಂಚು ಹೊಟ್ಟೆಯನ್ನು ಕೊಯ್ಯುತ್ತಾರೆ. ಅರವಳಿಕೆ ಬಳಸಿ ಶಸ್ತ್ರಕ್ರಿಯೆ ಮಾಡಿದರೂ, ನಂತರದಲ್ಲಿ ಹೊಟ್ಟೆಗೆ ಹೊಲಿಗೆ ಹಾಕಲಾಗುತ್ತದೆ. ಇದರಿಂದ ಹೊಟ್ಟೆಗೆ ಕಲೆಯಾಗುತ್ತದೆ. ಮುಖ್ಯವಾಗಿ ಸೋಂಕಿನ ಸಮಸ್ಯೆ, ರಕ್ತಸ್ರಾವ ಉಂಟಾಬಹುದು. ಆದರೆ



ಹೊಟ್ಟೆ ಕೊಯ್ದು ಗರ್ಭಕೋಶ ತೆಗೆಯುವ ವಿಧಾನಕ್ಕಿಂತ ಇಂದು ಹೆಚ್ಚು ಚಾಲ್ತಿಯಲ್ಲಿರುವುದು ಉದರದರ್ಶಕ ಶಸ್ತ್ರ ಚಿಕಿತ್ಸೆ. ಈ ಶಸ್ತ್ರ ಚಿಕಿತ್ಸೆ ಇಂದು ಸಾಕಷ್ಟು ಯಶಸ್ವಿಯಾಗಿದೆ. ಹೊಟ್ಟೆಯ ಮೂರು ಅಥವಾ ನಾಲ್ಕು ಕಡೆಗಳಲ್ಲಿ ಚಿಕ್ಕ ರಂದ್ರ ತೆಗೆದು ನಳಿಕೆಗಳನ್ನು ತೂರಿಸಿ ಹೊಟ್ಟೆಯನ್ನು ಕೊಯ್ಯದೇ ನಡೆಸುವ ಶಸ್ತ್ರ ಚಿಕಿತ್ಸೆ ಇದಾಗಿದೆ. ಈ ಶಸ್ತ್ರ ಚಿಕಿತ್ಸೆ ಮಾಡಿಕೊಂಡ ಒಂದೇ ದಿನಕ್ಕೆ ಮಹಿಳೆ ಓಡಾಡಬಹುದು. ಎರಡು ದಿನ ಆರಾಮ ತೆಗೆದುಕೊಂಡ ಮೇಲೆ ಕಚೇರಿಗೂ ಹೋಗಿ ದುಡಿಯಬಹುದು. ಆದರೆ ಆರೋಗ್ಯದ ಬಗ್ಗೆ ಅತಿಯಾದ ಕಾಳಜಿ ಅವಶ್ಯಕ.

**– ಡಾ|| ಬಿ. ರಮೇಶ್**
**ಸ್ತ್ರೀರೋಗ ತಜ್ಞರು**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ದೂರವಾಣಿ ಸಂಖ್ಯೆ 080-23151873/ ಮೊಬೈಲ್ : 99000318 42**

## ಆಲ್ಟಿಯಸ್ ಹಾಸ್ಪಿಟಲ್

( Unit of Dr. Ramesh Hospital)

ಹೈಟೆಕ್ ಲ್ಯಾಪ್ರೋಸ್ಕೊಪಿ & ಗೈನೊಕಾಲಜಿ ಹಾಸ್ಪಿಟಲ್

**ರಾಜಾಜಿನಗರ**

ನಂ.6/63, 59ನೇ ಅಡ್ಡರಸ್ತೆ, 4ನೇ ಬ್ಲಾಕ್,
ರಾಜಾಜಿನಗರ ಎಂಟ್ರೆನ್ಸ್, ಎಂ.ಇ.ಐ. ಪಾಲಿಟೆಕ್ನಿಕ್ ಎದುರು,
ರಾಮಮಂದಿರ ಹತ್ತಿರ, ಬೆಂಗಳೂರು–10.
E-mail: endoram2006@yahoo.in,
Website: www.laparoscopicsurgeries.com

**ರಾಜರಾಜೇಶ್ವರಿನಗರ**

ನಂ.915, 1ನೇ ಮಹಡಿ, ಧನುಷ್ ಪ್ಲಾಜಾ
ಐಡಿಯಲ್ ಹೋಮ್ಸ್ ಟೌನ್‌ಷಿಪ್,
ಗೋಪಾಲನ್‌ಮಾಲ್ ಹತ್ತಿರ
ರಾಜಾಜಿನಗರ, ಬೆಂಗಳೂರು–98.
E-mail: www.laparoscopicsurgeries.com